ಬೈಂದೂರು ಪಟ್ಟಣದ ನೀರು ಸರಬರಾಜು ಯೋಜನೆಯ ಬಗ್ಗೆ

೧೧೧೩. **ಶ್ರೀ ಜಿ. ಎಸ್. ಆಚಾರ್** (ಬೈಂದೂರು).— ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪುರಸಭೆಗೆ ನಲ್ಲಿ ನೀರು ಯೋಜನೆ ಮಂಜೂರು ಮಾಡಿ ೧೯೮೬-೮೭ ರಲ್ಲಿ ಕಾರ್ಯಾರಂಭ ಮಾಡಲಾಗುವುದೆಂದು ಕಳೆದ ವರ್ಷವೇ ವಾಗ್ದಾನವಿತ್ತಿದ್ದರೂ ಇನ್ನು ಕೆಲಸ ಪ್ರಾರಂಭವಾಗದಿರಲು ಕಾರಣವೇನು ?

ಆ) ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿರುವ ಈ ಪುರಸಭೆಗೆ ಕಾಮಗಾರಿ ಮಂಜೂರಾತಿಯನ್ನು ಯಾವಾಗ ಮಾಡಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದ ನಂತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಜಿ. ಎಸ್. ಆಚಾರ್.— ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪುರಸಭೆಗೆ ನಲ್ಲಿ ನೀರು ಸರಬರಾಜು ಯೋಜನೆಗೆ ಕಳೆದ ವರ್ಷವೇ ಮಂಜೂರಾತಿಯನ್ನು ಇತ್ತು ೧೯೮೬—೮೭ ರಲ್ಲಿ ಕೈಗೆ ತೆಗೆದುಕೊಳ್ಳಲಾಗುತ್ತದೆಂದು ವಾಗ್ದಾನವನ್ನು ಕೊಟ್ಟಿದ್ದರು. ಆದ್ದರಿಂದ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ಕಾರ್ಯಾರಂಭ ಮಾಡಲಿಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ ?

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ ಹಣದ ಒಂದು ತೊಂದರೆಯೇ ಮುಖ್ಯವಾದ ಕಾರಣವಾಗಿರುತ್ತದೆ. ೧೯೮೩ ರಲ್ಲಿ ೧೧.೫ ಲಕ್ಷ ಇದ್ದದ್ದು ಈಗ ಪರಿಷ್ಕರಣ ಮಾಡಿದಮೇಲೆ ೨೧ ಲಕ್ಷಕ್ಕೆ ಹೋಗಿದೆ. ಮಾನ್ಯ ಸದಸ್ಯರು ಹೇಳಿದಹಾಗೆ ನೀರನ್ನು ಒದಗಿಸತಕ್ಕಂಥ ಜವಾಬ್ದಾರಿ ಸರ್ಕಾರಕ್ಕೆ ಇರುತ್ತದೆ. ಈಗ ೧೫ ಸಾವಿರ ಜನಸಂಖ್ಯೆ ಇರತಕ್ಕಂಥ ಪಟ್ಟಣಗಳಿಗೆ ಸರ್ಕಾರವೇ ಹಣವನ್ನು ಒದಗಿಸಿ ಕುಡಿಯುವ ನೀರನ್ನು ಒದಗಿಸತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತದೆ. ಹಣದ ತೊಂದರೆಯಿರುವುದರಿಂದ ಸ್ವಲ್ಪ ನಿಧಾನವಾಗುತ್ತಿದೆ. ಆದರೆ ಸನ್ಮಾನ್ಯ ಆಚಾರ್ಯರವರಿಗೆ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಹುಡ್ಕೋದಿಂದ ಹಣವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲಿಂದ ಹಣವೇನಾದರೂ ಸಿಕ್ಕಿದರೆ, ಅವರು ಕೊಡತಕ್ಕಂಥ ಹಣವನ್ನು ಸೇರಿಸಿಕೊಂಡು ಈ ಯೋಜನೆಯನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಲಿಕ್ಕೆ ಬಯಸುತ್ತೇನೆ.

ಧಾರವಾಡ ಜಿಲ್ಲೆಯಲ್ಲಿರುವ ಬಯೋಗ್ಯಾಸ್ ಪ್ಲಾಂಟುಗಳು.

೧೧೮೩ **ಶ್ರೀ ಸಿ. ಎಂ ಉದಾಸಿ.** (ಹಾನಗಲ್).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಧಾರವಾಡ ಜಿಲ್ಲೆಯಲ್ಲಿ ೧೯೮೩-೮೪ನೇ ಸಾಲಿನಿಂದ ತಯಾರಾದ ಬಯೋಗ್ಯಾಸ್ ಪ್ಲಾಂಟುಗಳು ಎಷ್ಟು ?

(ಆ) ಅವುಗಳಲ್ಲಿ ಪ್ರತಿ ವರ್ಷ ರೈತರಿಗೆ ಇಲಾಖೆಯಿಂದ ತಯಾರುಮಾಡಿಕೊಟ್ಟ ಬಯೋಗ್ಯಾಸ್ ಪ್ಲಾಂಟ್‌ಗಳೆಷ್ಟು ?

(ಇ) ಅವುಗಳಲ್ಲಿ ವಿಫಲವಾದವುಗಳೆಷ್ಟು ? ಮತ್ತು ಅವುಗಳನ್ನು ಸರಿಪಡಿಸಲಾಗಿದೆಯೇ

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು).—

(ಅ) ೧೯೮೭ನೇ ಜನವರಿ ಅಂತ್ಯದವರೆಗೆ ೧೭೪೨ ಸ್ಥಾವರಗಳನ್ನು ನಿರ್ಮಿಸಲಾಗಿದೆ.

(ಆ)

ವರ್ಷ		ಸ್ಥಾವರಗಳ ಸಂಖ್ಯೆ
೧೯೮೩–೮೪	...	೧೯೮
೧೯೮೪–೮೫	...	೨೨೬
೧೯೮೫–೮೬	...	೯೮೮
೧೯೮೬–೮೭	...	೩೩೦ (೧೯೮೭ನೇ ಜನವರಿ ಅಂತ್ಯದವರೆವಿಗೆ).

(ಇ) ಕಾರ್ಯನಿರ್ವಹಿಸದೆ ಇರುವ ಅನಿಲ ಯಂತ್ರಗಳ ಸಂಖ್ಯೆ ೨೦೫
ದುರಸ್ತಿಪಡಿಸಿದ ಅನಿಲಯಂತ್ರಗಳ ಸಂಖ್ಯೆ ೬೮

ಶ್ರೀ ಸಿ. ಎಂ. ಉದಾಸಿ.—ಸನ್ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರದಲ್ಲಿ ಗೋಬರ್ ಗ್ಯಾಸ್ ಮತ್ತು ಬಯೋಗ್ಯಾಸ್ ಎರಡೂ ಸೇರಿರಬಹುದೆಂದು ನನ್ನ ಭಾವನೆಯಾಗಿರುತ್ತದೆ. ಈ ಬಯೋಗ್ಯಾಸನ್ನು ಎಷ್ಟು ತೀವ್ರತೆಯಿಂದ ಪ್ರಾರಂಭ ಮಾಡಿದರೋ ಅಷ್ಟೇ ಅದು ಕಾರ್ಯ ನಿರ್ವಹಿಸುತ್ತಿಲ್ಲ. ಪ್ರಾರಂಭಮಾಡಿದ ೨೩೦ ಯೂನಿಟ್‌ಗಳಲ್ಲಿ ಗ್ಯಾಸ್ ಬರಲಿಲ್ಲ. ಯಾವಗಲ್ ತಾಲ್ಲೂಕಿನಲ್ಲಿ ೩೧ ಯೂನಿಟ್‌ಗಳಲ್ಲಿ ಬಯೋಗ್ಯಾಸ್ ತಯಾರು ಮಾಡಲು ಆರಂಭಿಸಿ ಗ್ಯಾಸ್ ಉತ್ಪಾದನೆಯಾಗದೆ ಇರುವುದರಿಂದ ಸಾಲವನ್ನು ತೆಗೆದುಕೊಂಡಂಥ ರೈತರು ಸಾಲಗಾರರಾಗಿ ತೊಂದರೆಪಡುತ್ತಿದ್ದಾರೆ. ಈ ತಾಂತ್ರಿಕ ದೋಷಕ್ಕೆ ಯಾರು ಕಾರಣರು ಇರುತ್ತಾರೋ, ಯಾವ ಅಧಿಕಾರಿಗಳು ಸಂಬಂಧಪಟ್ಟಿರುತ್ತಾರೋ ಅವರ ಮೇಲೆ ಜವಾಬ್ದಾರಿಯನ್ನು ವಹಿಸಿ ಸಾಲಪರಿಹಾರವನ್ನು ಮಾಡಬೇಕು. ಅಧಿಕಾರಿಗಳಿಗೆ ಬರುವುದಿಲ್ಲವೆಂದರೆ ಬೇರೆ ಯಾವ ರೀತಿಯಾದರೂ ಪರಿಹಾರ ಸಿಗುವಂತೆ ಮಾನ್ಯ ಮಂತ್ರಿಗಳು ಪರಿಹಾರವನ್ನು ಕಂಡುಹಿಡಿಯಬೇಕು. ಕಳೆದ ವರ್ಷದಲ್ಲಿ ಈ ಪ್ರಶ್ನೆಯನ್ನು ಕೇಳಿದಾಗ ಅದನ್ನು ಪರಿಶೀಲನೆ ಮಾಡಿ ಆ ಬಗ್ಗೆ ರಿಪೋರ್ಟ್ ಮಾಡುತ್ತೇವೆಂದು ಉತ್ತರವನ್ನು ಕೊಟ್ಟಿದ್ದರು. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ನಾವು ಎರಡು ಮಾದರಿಯ ಗೋಬರ್‌ಗ್ಯಾಸ್ ಪ್ಲಾಂಟುಗಳನ್ನು ಮಾಡುತ್ತೇವೆ. ಒಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದವರು ಮಾಡಿರತಕ್ಕ ಮಾದರಿ. ಇನ್ನೊಂದು ಖಾದಿ ಮತ್ತು ಗ್ರಾಮೋದ್ಯೋಗದವರು ಮಾಡಿರತಕ್ಕ ಮಾದರಿ. ಖಾದಿ ಮತ್ತು ಗ್ರಾಮೋದ್ಯೋಗದವರು ಮಾಡಿರತಕ್ಕ ಮಾದರಿಯ ಬಗ್ಗೆ ಯಾವ ದೂರೂ ಇಲ್ಲ, ಚೆನ್ನಾಗಿವೆ. ಕೃಷಿ ವಿಶ್ವವಿದ್ಯಾನಿಲಯದವರು ಮಾಡಿರುವ ಮಾದರಿಯಲ್ಲಿ ದೂರುಗಳು ಬರುತ್ತಿವೆ. ಆದ್ದರಿಂದ ೧೯೮೫ರಿಂದಲೇ ಆ ಮಾದರಿ ಮಾಡುವುದನ್ನು ನಿಲ್ಲಿಸಿದ್ದೇವೆ. ವುಗಳಲ್ಲಿ ತೊಂದರೆ ಇದೆ. ಮತ್ತೆ ಅವುಗಳನ್ನು ರಿಪೇರಿ ಮಾಡಬೇಕೆಂದು ಒಂದೂವರೆಯಿಂದ ೨ ಸಾವಿರ ರೂಪಾಯಿಗಳವರೆಗೆ ರಿಪೇರಿಗಾಗಿ ಕೊಡುವ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ. ಇದರಲ್ಲಿ ಅಧಿಕಾರಿಗಳ ಪಾತ್ರ ಏನೂ ಇಲ್ಲ. ಯಾವ ಮಾದರಿಯಲ್ಲಿ ಮಾಡಬೇಕೆಂದು ಕೊಟ್ಟಿದ್ದೇವೋ ಅದೇ ಮಾದರಿಯಲ್ಲಿ ಮಾಡಿದ್ದಾರೆ. ಆದ್ದರಿಂದ ರಾಜ್ಯದಲ್ಲಿರತಕ್ಕ ಪ್ಲಾಂಟ್‌ಗಳು ಏನು ಕೆಟ್ಟಿವೆ ಅವುಗಳನ್ನು ರಿಪೇರಿ ಮಾಡುವುದಕ್ಕೆ ಒಂದು ಯೋಜನೆ ಮಾಡಿ ಮೈರಾದ್ ಏಜೆನ್ಸಿಗೆ ವಹಿಸಿದ್ದೇವೆ. ಅವರು ೬ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಜೊತೆಗೆ ಕೃಷಿ ವಿಶ್ವವಿದ್ಯಾನಿಲಯದವರನ್ನು ಕರೆದುಕೊಂಡು ರಿಪೇರಿ ಮಾಡಬೇಕು. ರಿಪೇರಿ ಆದಮೇಲೆ ೨ ವರ್ಷ ಗ್ಯಾರಂಟಿ ಕೊಡಬೇಕು. ಎರಡು ವರ್ಷದಲ್ಲಿ ಸರಿಯಾಗಿ ಕೆಲಸ ಮಾಡಲಿಲ್ಲವೆಂದರೆ ಪರಿಹಾರ ಅಥವಾ ಲೋನ್ ಅನ್ನು ವಜಾ ಮಾಡುವ ವಿಚಾರವನ್ನು ಪರಿಶೀಲನೆ ಮಾಡಬಹುದು.

ಶ್ರೀ ಸಿ. ಎಂ. ಉದಾಸಿ.—ವರ್ಷದಿಂದ ಇದೇ ರೀತಿ ಉತ್ತರ ಕೇಳುತ್ತಿದ್ದೇನೆ ನನ್ನ ಸಂಶಯ ಏನೆಂದರೆ ಇವರು ಸೂಚಿಸಿದ ಹಾಗೆ ೨ಸಾವಿರ ರೂಪಾಯಿಗಳಲ್ಲಿ ಪ್ಲಾಂಟುಗಳನ್ನು ಪರಿವರ್ತನೆ ಮಾಡುವುದಕ್ಕಾಗುವುದಿಲ್ಲ. ಗೋಬರ್ ಗ್ಯಾಸ್ ಪ್ಲಾಂಟುಗಳನ್ನು ಹೊಸದಾಗಿ ಹಾಕಬೇಕೇ ಹೊರತು ರಿಪೇರಿ ಮಾಡಿದರೆ ಆಗುವುದಿಲ್ಲ. ಬಯೋಗ್ಯಾಸ್ ಪ್ಲಾಂಟುಗಳು ರಿಪೇರಿ ಫಲಪ್ರದವಾಗುವುದಿಲ್ಲ. ಆದ್ದರಿಂದ ಇದಕ್ಕೆ ಪರಿಹಾರ ಕೊಡುತ್ತೀರಾ ? ಹೊಸದಾಗಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಎಲ್ಲಾ ಕಡೆ ಜನರು ಈ ಮಾದರಿ ಬೇಡ, ಖಾದಿ ಮತ್ತು ಗ್ರಾಮೋದ್ಯೋಗದ ಮಾದರಿ ತರಹ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ನಿಯಮಗಳ ಪ್ರಕಾರ ೨-೨½ ಸಾವಿರ ರೂಪಾಯಿಗಳವರೆಗೆ ರಿಪೇರಿಗೆ ಕೊಡುವುದಕ್ಕೆ ಅವಕಾಶ ಇದೆ. ರಿಪೇರಿ ಆದಮೇಲೂ ಏನಾದರೂ ವೈಫಲ್ಯ ಕಂಡುಬಂದರೆ ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸುತ್ತೇನೆ.

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಸಮುದಾಯ ಭವನಗಳ ನಿರ್ಮಾಣ.

೫೩೧. ಶ್ರೀ ಎಂ. ಶಿವಣ್ಣ (ಹೆಗ್ಗಡೆದೇವನ ಕೋಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಡಿಯಲ್ಲಿ ಸಮುದಾಯ ಭವನಗಳನ್ನು ನಿರ್ಮಿಸುವ ಬಗ್ಗೆ ಸರ್ಕಾರದವರು ಆದೇಶವನ್ನೇನಾದರೂ ನೀಡಿದ್ದಾರೆಯೇ ?

(ಆ) ಕಳೆದ ಅಧಿವೇಶನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ಬಿದರಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸಮುದಾಯ ಭವನವನ್ನು ನಿರ್ಮಿಸುವ ಬಗ್ಗೆ ಮೇಲ್ಕಂಡ ಯೋಜನೆಯನ್ವಯ ಜಾಗ್ರತೆ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗುವುದು ಎಂಬುದಾಗಿ ಆಶ್ವಾಸನೆ ನೀಡಿದ್ದುದು ನಿಜವಲ್ಲವೆ ?

(ಇ) ಹಾಗಿದ್ದಲ್ಲಿ ಸದರಿ ಸಮುದಾಯ ಭವನದ ಕಟ್ಟಡದ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

(ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

(ಅ) ಇಲ್ಲಾ.

(ಆ) ನಿಜವಲ್ಲಾ.

(ಇ) ಸದರಿ ಕಟ್ಟಡವನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯ ೧೯೮೭-೮೮ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಕಾಮಗಾರಿಯನ್ನು ಕೈಗೊಳ್ಳಲು ಆದೇಶ ಎತ್ತಿರುತ್ತದೆ.

(ಈ) ಉದ್ಭವಿಸುವುದಿಲ್ಲ.

ಶ್ರೀ ಎಂ. ಶಿವಣ್ಣ.—ಮಂತ್ರಿಗಳು ಇಲ್ಲ, ನಿಜವಲ್ಲ ಎಂಬ ಉತ್ತರ ಕೊಟ್ಟಿದ್ದಾರೆ. ಬಿದರಹಳ್ಳಿಯಲ್ಲಿ ಒಂದು ಸಮುದಾಯ ಭವನದ ಕಟ್ಟಡ ಕಟ್ಟಲು ೧೯೬೮ರಲ್ಲಿ ಮಂಜೂರಾತಿ ನೀಡಿ ೮-೧೦ ಸಾವಿರ ರೂಪಾಯಿ ಖರ್ಚು ಮಾಡಿ ಬೇಸ್‌ಮೆಂಟ್‌ವರೆಗೆ ಕಟ್ಟಿದ್ದಾರೆ. ಆಮೇಲೆ ಇದುವರೆಗೆ ಯಾವ ಒಂದು ಕ್ರಮವನ್ನು ಕೈಗೊಳ್ಳಲಿಲ್ಲ ಮಂಜೂರಾತಿ ನೀಡಿರತಕ್ಕದ್ದು ಮತ್ತು ೮ ಸಾವಿರ ರೂಪಾಯಿ ಖರ್ಚು ಮಾಡಿ ಬೇಸ್‌ಮೆಂಟ್‌ವರೆಗೆ ಕಟ್ಟಿರತಕ್ಕದ್ದು ನಿಜವಲ್ಲವೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಆ ವಿವರಗಳು ನನ್ನ ಹತ್ತಿರ ಇಲ್ಲ. ಈ ವರ್ಷ ಕಟ್ಟಡದ ಕೆಲಸ ಮುಗಿಸಬೇಕೆಂದು ಆಕ್ಷನ್ ಪ್ಲಾನ್‌ನಲ್ಲಿ ಸೇರಿಸಿದ್ದೇವೆ. ಎಷ್ಟು ಹಣಬೇಕೋ ಅಷ್ಟನ್ನು ಕೊಟ್ಟಿದ್ದೇವೆ. ಈ ವರ್ಷ ಕೆಲಸ ಮುಗಿಸಬೇಕೆಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಎಂ. ಶಿವಣ್ಣ.—ನಾನು ನೋಡಿದ ಹಾಗೆ ಸಾಮಾನ್ಯವಾಗಿ ಪರಿಶಿಷ್ಟ ಜಾತಿ ವರ್ಗದವರು ವಾಸ ಮಾಡತಕ್ಕ ಪ್ರದೇಶಗಳಲ್ಲಿ ಸಮುದಾಯ ಭವನದ ಕಟ್ಟಡಗಳನ್ನು ಹೆಚ್ಚಾಗಿ ಕಟ್ಟುತ್ತಿದ್ದರು. ೧೯೬೨-೬೩ರಲ್ಲಿ ರಾಜ್ಯದ ಬಹುತೇಕ ಕಡೆ ಈ ಕಟ್ಟಡಗಳನ್ನು ಕಟ್ಟಲಾಗಿದೆ. ಅಂದಿನಿಂದ ಇಂದಿನವರೆಗೆ ಪರಿಶಿಷ್ಟ ಜಾತಿ ಮತ್ತು ವರ್ಗದವರು ಇರುವ ಕಡೆ ಕಟ್ಟಡ ಕಟ್ಟಿದ್ದು ಕಂಡುಬರಲಿಲ್ಲ. ಈಗ ಎನ್.ಆರ್.ಇ.ಪಿ. ಯೋಜನೆಯಲ್ಲಿ ಈ ಕೆಲಸ ಮಾಡುವ ಉದ್ದೇಶ ಇಟ್ಟುಕೊಂಡಿದ್ದೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸಭಾಧ್ಯಕ್ಷರೆ, ಇದೊಂದು ವಿಶೇಷ ಯೋಜನೆ ಮಾಡಿದ್ದೇವೆ. ಕೇಂದ್ರ ಸರ್ಕಾರದ ನಿರ್ದೇಶನಕ್ಕನುಗುಣವಾಗಿ ಎನ್.ಆರ್.ಇ.ಪಿ. ಹಣವನ್ನು ಖರ್ಚು ಮಾಡಬೇಕು.